Rotary
– 2026-27 –

ಮಿಡ್‌ಟೌನ್ ನ್ಯೂಸ್

# Midtown News

Club No 21853 | Charter Date : 16.05.1984 | Zone : 10 | R.I Dist. 3182

In House Bulletin of Rotary Club Shimoga Mid Town

ಟೀಂ ಸ್ಪಂದನ : 2026-27 | TEAM SPANDANA : 2026-27

R.I. President : Rtn. Olayinka H. Babalola
Dist. Governor : Rtn. B.M. Bhat
Asst. Governor : Rtn. Teerthaiah K.H.
President : Rtn. Dr. Sridhara S.
Secretary : Rtn. Ujwala B.S.
Director : Rtn. Dr. Ramesh R.
Editor : Rtn. Meera Nadig
Members : Rtn. Anand I.R., Rtn. Preethi Deepak
Rtn. Shilpa H.G., Rtn. K.V.L. Raju



We meet every Thursday at
Rotary Midtown Hall, SHIVAMOGGA-577201

rotaryshimogamidtown@gmail.com

Vol. 43 | 16 - 7 - 2026 | ISSUE 3

## Maternal and Child Health Month

### ದಿನಾಂಕ 9-7-2026ರ ವಾರದ ಸಭೆಯ ವರದಿ

ದಿನಾಂಕ 9-7-2026ರ ವಾರದ ಸಭೆಯು ಕ್ಲಬ್ ಅಫೇರ್ಸ್ ಸಭೆಯಾಗಿತ್ತು. ಕ್ಲಬ್ ಅಧ್ಯಕ್ಷರಾದ ರೊ. ಡಾ|| ಶ್ರೀಧರರವರು ಸಭೆಗೆ ಆಗಮಿಸಿದ್ದ ಎಲ್ಲಾ ರೋಟರಿ




ಸದಸ್ಯರನ್ನು ಆಹ್ವಾನಿಸಿದರು. ಮೊದಲಿಗೆ ರೊ. ಡಾ|| ರಮೇಶ್ ಆರ್. ರವರು ರೋಟರಿ ಮಾಹಿತಿಯನ್ನು ಸಭೆಯಲ್ಲಿ ವಾಚಿಸಿದರು.

ದಿನಾಂಕ 8-7-2026ರಂದು ನಡೆದ ಜಂಟಿ ಪದಾಧಿಕಾರಿಗಳ ಸಭೆಯ ಮಿನಿಟ್ಸ್ ಮೀಟಿಂಗ್‌ನ್ನು 2026-27ನೇ ಸಾಲಿನ ಕಾರ್ಯದರ್ಶಿ ರೊ. ಉಜ್ವಲ ಬಿ.ಎಸ್.ರವರು ಸಭೆಯ ಮುಂದಿಟ್ಟರು. ಜಂಟಿ ಬೋರ್ಡ್ ಮಿಂಟಿಂಗ್‌ನಲ್ಲಿ ಪೂರ್ವ ಕಾರ್ಯದರ್ಶಿಗಳಾದ ರೊ. ಮಂಜುನಾಥ್ ಆರ್.ಎನ್. ರವರು ಕ್ಲಬ್ 2025-26ನ ಕ್ಲಬ್‌ನ ಎಲ್ಲಾ ಕಡತಗಳನ್ನು ಈಗಿನ ಕಾರ್ಯದರ್ಶಿಗಳಿಗೆ ಹಸ್ತಾಂತರಿಸಿದ ಮಾಹಿತಿ ನೀಡಿದರು. ಹಾಗೆಯೆ ಹಿಂದಿನ ಸಾಲಿನ ಖಜಾಂಚಿಗಳಾದ ರೊ. ಬದ್ರಿ ಪ್ರಸಾದ್ ಟಿ.ಎಸ್. ರವರು ಬ್ಯಾಂಕಿಂಗ್‌ಗೆ ಸಂಬಂಧ ಪಟ್ಟ ಎಲ್ಲಾ ಕಡತಗಳನ್ನು ಈಗಿನ ಖಜಾಂಚಿಗಳಾದ ರೊ. ಡಾ|| ಜೀನತ್ ಅಂಬರೀನ್‌ರವರಿಗೆ ಹಸ್ತಾಂತರಿಸಿದ ಬಗ್ಗೆ ತಿಳಿಸಿದರು ಹಾಗೂ ಜಂಟಿ ಪದಾಧಿಕಾರಿಗಳು ಸಮ್ಮತ ದೊರೆತಿದೆ ಎಂದು ತಿಳಿಸಿದರು.

ಆಗಸ್ಟ್ 22ರಂದು ನಡೆಯುವ ಝೋನಲ್ ಮೆಂಬರ್‌ಶಿಪ್ ಡೆವಲೆಪ್‌ಮೆಂಟ್ ಸೆಮಿನಾರ್‌ನ್ನು ನಮ್ಮ ಕ್ಲಬ್ಬಿನಿಂದ ಈ ಸಾಲಿನ ಪ್ರಪ್ರಥಮ ಝೋನಲ್ ಇವೆಂಟನ್ನು ನಡೆಸಲು ಅವಕಾಶ ದೊರೆತಿದ್ದು, ಹಾಗಾಗಿ ಈ ಕಾರ್ಯಕ್ರಮಕ್ಕೆ ನಮ್ಮ ಎಲ್ಲಾ ಸದಸ್ಯರ ಸಹಕಾರ ಬಹು ಮುಖ್ಯವಾಗಿದೆ ಎಂದು ಅಧ್ಯಕ್ಷರು ತಿಳಿಸಿದರು.

ಬೇರೆ ಬೇರೆ ಸಂಸ್ಥೆ ಮತ್ತು ಶಾಲೆಗಳಿಂದ ಬರುವ ವಿನಂತಿ ಪತ್ರಗಳನ್ನು ಸರಿಯಾಗಿ ಪರಿಶ್ಕರಿಸಿ ನಂತರದಲ್ಲಿ ದೇಣಿಗೆಗಳನ್ನು ಕೊಡುವ ವಿಚಾರವಾಗಿ ಒಂದು ಸಮಿತಿಯನ್ನು ರಚಿಸುವ ಬಗ್ಗೆ ಅಧ್ಯಕ್ಷರು ತಿಳಿಸಿದರು. ಕ್ಲಬ್ಬಿನ ಚಟುವಟಿಕೆಗಳಿಗೆ ಒಬ್ಬ ಸಹಾಯಕನನ್ನು ನಿಯೋಜಿಸಕೊಳ್ಳುವ ವಿಚಾರ ತಿಳಿಸಿದರು.

ಹಾಗೇ ಮುಂದಿನ ದಿನಗಳಲ್ಲಿ 3 ಜಾಗತಿಕ ಯೋಜನೆಗಳನ್ನು ಮಾಡುವ ಯೋಚನೆಗಳ ಬಗ್ಗೆ ಅಧ್ಯಕ್ಷರು ಹೇಳುತ್ತಾ 1) ಸಾಗರದ ಹತ್ತಿರ ಇರುವ ಮುಪ್ಪಾನೆಯಲ್ಲಿ ಆರೋಗ್ಯದ ತುರ್ತು ಪರಿಸ್ಥಿತಿ ಇದ್ದಾಗ ಸರಿಯಾದ ವಾಹನದ ವ್ಯವಸ್ಥೆ ಇಲ್ಲದಿರುವುದರಿಂದ ಒಂದು ಅಂಬುಲೆನ್ಸ್ ನೀಡುವ ಯೋಚನೆ ಇದೆ ಹಾಗೂ ಇದರ ಬಗ್ಗೆ ಸಮಾಲೋಚನೆ ಈಗಾಗಲೇ ನಡೆಸಿರುವ ಬಗ್ಗೆ ತಿಳಿಸಿದರು. 2) ಶಂಕರ ಕಣ್ಣಿನ ಆಸ್ಪತ್ರೆಯೊಂದಿಗೆ ವಿಷನ್ ಯೋಜನೆ ರೂಪಿಸಿಕೊಂಡು ಅವರ ಕೇಂದ್ರ ಇರುವ ಕಡೆ ರೋಟರಿ ಸಹಭಾಗಿತ್ವದಲ್ಲಿ ಕೆಲಸ ಮಾಡುವ ವಿಚಾರವಿದೆ ಎಂದರು. 3) ಇತ್ತೀಚಿನ ದಿನಗಳಲ್ಲಿ ಹೃದಯಾಘಾತ ಹೆಚ್ಚುತ್ತಿರುವುದರಿಂದ ಒಂದು ಮೊಬೈಲ್ ಕಾರ್ಡಿಯಾಕ್ ವ್ಯಾನ್ ಸೇವೆ ಮಾಡುವ ವಿಚಾರವಿದೆ. ಇದರಲ್ಲಿ ECG, ECHO ಇನ್ನು ಮುಂತಾದ ಆರೋಗ್ಯಕ್ಕೆ ಸಂಬಂಧ ಪಟ್ಟ ತುರ್ತು ಉಪಕರಣಗಳನ್ನು ಅಳವಡಿಸಲಾಗಿರುತ್ತದೆ. ಇದಕ್ಕೆ ತಗಲುವ ವೆಚ್ಚವು ಕಡಿಮೆ ಇರುವುದರಿಂದ ಎಲ್ಲಾ ಹಳ್ಳಿಗಳಿಗೂ ತಿಳಿಸಬಹುದು ಮತ್ತು ಸಾಮಾನ್ಯ ಜನರಿಗೂ ಅರಿವು ಮೂಡಿಸಬಹುದು. ಇದಕ್ಕಾಗಿ ಸುಬ್ಬಯ್ಯ ಆಸ್ಪತ್ರೆಯಲ್ಲಿ ಈಗಾಗಲೇ ಮಾತನಾಡಿ ಮನವರಿಕೆ ಮಾಡಲಾಗಿದೆ ಎಂದು ತಿಳಿಸಿದರು.

2025-26ರ ವಾರ್ಷಿಕ ಲೆಕ್ಕಪತ್ರಗಳನ್ನು ಅಂದಿನ ಸಾಲಿನ ಕಾರ್ಯದರ್ಶಿಗಳಾದ ರೊ. ಆರ್.ಎನ್. ಮಂಜುನಾಥ್‌ರವರು, ಖಜಾಂಚಿ ರೊ. ಬದ್ರಿ ಪ್ರಸಾದ್‌ರವರ ಅನುಪಸ್ಥಿತಿಯಲ್ಲಿ ಸಭೆಯ ಮುಂದಿಟ್ಟು ಅನುಮೋದನೆ ಪಡೆದುಕೊಂಡರು. ಹಾಗೂ ಲೆಕ್ಕಪರಿಶೋಧಕರ ವರದಿಯನ್ನು ಸಹ ಓದಿದರು.

ನಿರ್ದೇಶಕರ ಮಂಡಳಿ ಸದಸ್ಯರೆಲ್ಲರೂ ತಮ್ಮ ಕೇಂದ್ರೀಕೃತ ಪ್ರದೇಶದಲ್ಲಿ ಈ ವರ್ಷ ನಡೆದಿರುವ ಹಾಗೂ ಮುಂದೆ ನಡೆಯಲಿರುವ ಕಾರ್ಯಕ್ರಮಗಳ ಬಗ್ಗೆ ತಿಳಿಸಿದರು. ಅಧ್ಯಕ್ಷರು ತಮ್ಮ ಸ್ಪಂದನ ತಂಡಕ್ಕೆ ಮೆಚ್ಚುಗೆ ತಿಳಿಸಿದರು ಹಾಗೂ ನಾವುಗಳು ಮುಂದಿನ ದಿನಗಳಲ್ಲಿ ಧನಾತ್ಮಕ ಚಿಂತನೆಯೊಂದಿಗೆ ಕೆಲಸ ಮಾಡೋಣ ಎಂದು ಹುರಿದುಂಬಿಸಿದರು.

ಅಧ್ಯಕ್ಷರು ತಮ್ಮ ಪ್ರಕಟಣೆಯಲ್ಲಿ 16-7-2026ರಂದು ಡಾ|| ರಕ್ಷಾರಾವ್‌ರವರಿಂದ ಋತುಮತಿಯಿಂದ ಋತುಬಂಧಕ್ಕೆ ಎಂಬ ವಿಷಯದ ಬಗ್ಗೆ ಉಪನ್ಯಾಸ, 23-7-2026ರಂದು ಉಪನಿರ್ದೇಶಕ ಡಾ|| ಸಂತೋಷ್‌ರವರಿಂದ ಸಮಾಜದಲ್ಲಿ ಮಹಿಳಾ ಮತ್ತು ಮಕ್ಕಳಿಗೆ ಇರುವ ಸೌಲಭ್ಯಗಳ ಬಗ್ಗೆ PPT, 30-7-2026 ರಂದು ಡಾಕ್ಟರ್ಸ್ ಡೇ ಮತ್ತು ಕೌಟುಂಬಿಕ ಸ್ನೇಹ ಮಿಲನ ಕಾರ್ಯಕ್ರಮಗಳು ನಡೆಯಲಿವೆ ಎಂದು ತಿಳಿಸಿದರು.



ಇಂದಿನ ಹಾಜರಾತಿ ಬಹುಮಾನಕ್ಕೆ ರೊ. ಡಾ|| ವಿಷ್ಣುಮೂರ್ತಿ ಮತ್ತು ರೊ. ಹರ್ಷ ಬಿ. ಕಾಮತ್‌ರವರು ಭಾಜನರಾದರು. ಕೊನೆಯಲ್ಲಿ ಸಂಪ್ರದಾಯದಂತೆ ಕಾರ್ಯದರ್ಶಿ ರೊ. ಉಜ್ವಲ ಬಿ.ಎಸ್.ರವರ ವಂದನಾರ್ಪಣೆಯೊಂದಿಗೆ ಸಭೆ ಸಂಪನ್ನವಾಯಿತು.

## ವಾರದ ಸಭೆ

ದಿನಾಂಕ : **16-7-2026, ಗುರುವಾರ**
ಸಮಯ : **ಸಂಜೆ 7.30ಕ್ಕೆ**
ಅತಿಥಿ : **ಡಾ|| ರಕ್ಷಾ ರಾವ್**
**ಖ್ಯಾತ ವೈದ್ಯರು, ಉಷಾ ನರ್ಸಿಂಗ್ ಹೋಂ, ಶಿವಮೊಗ್ಗ**
ವಿಷಯ : **ಋತು ಮತಿಯಿಂದ ಋತು ಬಂಧಕ್ಕೆ**



ದಿನಾಂಕ 6-7-2026ರಂದು ಹದಿಹರೆಯದ ಹೆಣ್ಣುಮಕ್ಕಳಿಗೆ ಪೌಷ್ಠಿಕ ಆಹಾರವನ್ನು ವಿತರಿಸಲಾಯಿತು.



ದಿನಾಂಕ 8-7-2026ರಂದು ಚಿಕ್ಕ ಮಕ್ಕಳಿಗೆ ಪೌಷ್ಠಿಕ ಆಹಾರವನ್ನು ವಿತರಿಸಲಾಯಿತು



ದಿನಾಂಕ 10-7-2026ರಂದು ಆಯನೂರಿನಲ್ಲಿ ತಾಯಿ ಮತ್ತು ಮಕ್ಕಳ ಆರೋಗ್ಯ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಲಾಯಿತು.



ದಿನಾಂಕ 9-7-2026ರಂದು ಶಿವಮೊಗ್ಗದ ಮಾಧವ ನೆಲೆಯಲ್ಲಿ ಹದಿಹರೆಯದ ಹೆಣ್ಣು ಮಕ್ಕಳಿಗೆ ಪ್ರೋಟೀನ್ ಪೌಡರ್ ವಿತರಿಸಲಾಯಿತು. ಹಾಗೂ ಆರೋಗ್ಯ ಬಗ್ಗೆ ಜಾಗೃತಿಯನ್ನು ಮೂಡಿಸಲಾಯಿತು.



ದಿನಾಂಕ 8-7-2026ರಂದು ಕಮಲಾ ನೆಹರೂ ಕಾಲೇಜಿನ ವಿದ್ಯಾರ್ಥಿನಿಯರಿಗೆ ರೊ. ಸಂತೋಷ್ ಎಸ್.ಎಸ್. ರವರು **Unlocking the Power of Mind** ಕಾರ್ಯಾಗಾರವನ್ನು ನಡೆಸಿಕೊಟ್ಟರು.

**Donate Blood and Save Lives**

## ROTARY INFORMATION



**Rtn. Dr. Ramesh R.**

**What is Interact ?**

"Interact is Rotary International's service club for young people ages 12-18. The name comes from **"Inter" + "Action" = International Action.** It's sponsored by a local Rotary club and gives students a chance to take action through service and leadership.

**Purpose** :

"The goal of Interact is to develop leadership skills, foster international understanding, and provide opportunities for youth to serve their community and the world. The motto is **"Service Above Self"**.

"Interact isn't just a club - it's where students learn to lead, serve, and make a real difference while having fun doing it."





ದಿನಾಂಕ 7-7-2026ರಂದು ಸೂಗೂರು ಪ್ರೌಢಶಾಲೆಯ ಸಿ.ವಿ. ರಾಮನ್ ಇಂಟರ್ಯಾಕ್ಟ್ ಕ್ಲಬ್‌ನ ಪದಗ್ರಹಣ ಸಮಾರಂಭವನ್ನು ನಡೆಸಲಾಯಿತು. ಈ ಸಂದರ್ಭದಲ್ಲಿ SSLC ಯಲ್ಲಿ ಉತ್ತಮ ಅಂಕಗಳಿಸಿದ 3 ಮಕ್ಕಳಿಗೆ ಪ್ರತಿಭಾ ಪುರಸ್ಕಾರವನ್ನು ನೀಡಲಾಯಿತು.





ದಿನಾಂಕ 7-7-2026ರಂದು ಹೊಳಲೂರು ಪ್ರೌಢಶಾಲೆಯ ಮಾರುತಿ ಇಂಟರ್ಯಾಕ್ಟ್ ಕ್ಲಬ್‌ನ ಪದಗ್ರಹಣ ಕಾರ್ಯಕ್ರಮವನ್ನು ನೆರವೇರಿಸ ಲಾಯಿತು. ಈ ಸಂದರ್ಭದಲ್ಲಿ SSLC ಯಲ್ಲಿ ಉತ್ತಮ ಅಂಕಗಳಿಸಿದ 3 ಮಕ್ಕಳಿಗೆ ಪ್ರತಿಭಾ ಪುರಸ್ಕಾರವನ್ನು ನೀಡಲಾಯಿತು.

### ROTARIAN BIRTHDAY *Greetings to*

| | |
|---|---|
| Rtn. Dr. Parameshwar | Jul-11 |

### MARRIAGE ANNIVERSARY *Greetings to*

| | |
|---|---|
| Rtn. Ashwin Shanbhag | Jul-12 |
| Ann Shweta | |
| Rtn. Srivatsa J. Rao | Jul-13 |
| Ann Srinkia S. Rao | |
| Rtn. Sureshkumar D. | Jul-15 |
| Rtn. Veena | |

Printed at : A.S.R. Offset Printers, #4, Dargah Complex, Tilak Nagar Main Road, SHIMOGA-577201, Ph : 278764